ಶಿವಮೊಗ್ಗ ನಗರಕ್ಕೆ ಪೊಲೀಸ್ ಠಾಣೆಗಳ ಮಂಜೂರಾತಿ.

2325(2880) ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶಿವಮೊಗ್ಗ ನಗರದ ಜನಸಂಖ್ಯೆಗೆ ಅನುಗುಣವಾಗಿ ಪೊಲೀಸ್ ಠಾಣೆಗಳನ್ನು ಮಂಜೂರು ಮಾಡಲು ಸರ್ಕಾರ ಕ್ರಮಕ್ಕೆಗೊಂಡಿದೆಯೇ? (ವಿವರ ನೀಡುವುದು)

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :—

ಅ) ಶಿವಮೊಗ್ಗ ನಗರದಲ್ಲಿ ಜನಸಂಖ್ಯೆಗನುಗುಣವಾಗಿ ಪೊಲೀಸು ಠಾಣೆಗಳಿವೆ.

ಶಿವಮೊಗ್ಗ ನಗರದಲ್ಲಿರುವ ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆ.

2326(2881) ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) :— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶಿವಮೊಗ್ಗ ನಗರದಲ್ಲಿರುವ ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆ ಗಂಧದ ಎಣ್ಣೆಯನ್ನು ಉತ್ಪಾದಿಸುತ್ತಿದೆಯೇ;

ಆ) ಶಿವಮೊಗ್ಗ ಗಂಧದ ಎಣ್ಣೆ ಕಾರ್ಖಾನೆಯಲ್ಲಿರುವ ನೌಕರರ ಸಂಖ್ಯೆ ಎಷ್ಟು ಪ್ರಸ್ತುತ ಅವರು ಯಾವ ಕೆಲಸ ನಿರ್ವಹಿಸುತ್ತಿದ್ದಾರೆ.

ಇ) ಶಿವಮೊಗ್ಗ ಗಂಧದ ಎಣ್ಣೆ ಕಾರ್ಖಾನೆಯಲ್ಲಿರುವ ಬಾಯ್ಲರ್ ಗುಣಮಟ್ಟ ಯಾವ ಹಂತದಲ್ಲಿದೆ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :—

ಅ) ಇಲ್ಲ.

ಆ) ನೌಕರರ ಸಂಖ್ಯೆ ಒಟ್ಟು 30, ಪ್ರಸ್ತುತ ಇವರು ಅಗರಬತ್ತಿ ಪ್ಯಾಕಿಂಗ್ ಮಾತ್ರ ಮಾಡುತ್ತಿದ್ದಾರೆ.

ಇ) ಬಾಯ್ಲರ್ ಸರಿ ಇದೆ. ಆದರೆ, ಚಿಮಣಿ ದುರಸ್ತಿ ಮಾಡಬೇಕಿದೆ. ಗಂಧದ ಎಣ್ಣೆ ಉತ್ಪಾದನೆ ಇಲ್ಲದಿರುವುದರಿಂದ, ದುರಸ್ತಿ ಕಾರ್ಯ ಸಧ್ಯಕ್ಕೆ ಮುಂದೂಡಲಾಗಿದೆ.